**MARCH 13, 2025**

**AKASHAVANI - DHARWAD**

**PRADESH SAAMACHARA (KANNADA) 12.00 P.M.**

**<><><>**

15 ನೇ ಆವೃತ್ತಿಯ ಕ್ಯೂಎಸ್. ಜಾಗತಿಕ ವಿಶ್ವವಿದ್ಯಾಲಯಗಳ ಶ್ರೇಯಾಂಕ ಪಟ್ಟಿ ಪ್ರಕಟಗೊಂಡಿದ್ದು, ದೇಶದ 9 ವಿಶ್ವವಿದ್ಯಾಲಯಗಳು ಹಾಗೂ ಶಿಕ್ಷಣ ಸಂಸ್ಥೆಗಳು, ಅಗ್ರ 50 ಸಂಸ್ಥೆಗಳಲ್ಲಿ, ಸ್ಥಾನ ಪಡೆದಿವೆ. ಆ ಪೈಕಿ, ಇಂಡಿಯನ್ ಇನ್ಸ್‌ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ – ಐ.ಐಎಂ. ಬೆಂಗಳೂರು, 40 ನೇ ಸ್ಥಾನ ಪಡೆದಿದ್ದು, ಭಾರತ ಒಟ್ಟಾರೆ, ಅಗ್ರ 50 ಸ್ಥಾನಗಳಲ್ಲಿ, 12 ನೇ ಸ್ಥಾನ ಪಡೆದುಕೊಂಡಿದೆ.

<><><>

ನಂದಿನ ಹಾಲಿನ ಪ್ರತಿ ಲೀಟರ್‌ಗೆ ಅಂದಾಜು, 5 ರೂಪಾಯಿ ದರ ಏರಿಕೆ ಪ್ರಸ್ತಾವಕ್ಕೆ, ರಾಜ್ಯ ಹೋಟೆಲ್‌ಗಳ ಸಂಘ – ಕೆ.ಎಸ್.ಎಚ್.ಎ. ತನ್ನ ವಿರೋಧ ವ್ಯಕ್ತಪಡಿಸಿದೆ. ಈ ಸಂಬಂಧ ರಾಜ್ಯ ಸರ್ಕಾರ ಹಾಗೂ ಕರ್ನಾಟಕ ಹಾಲು ಮಹಾ ಮಂಡಳ –ಕೆ.ಎಂ.ಎಫ್ ಗಳಿಗೆ, ಸಂಘದ ಅಧ್ಯಕ್ಷ ಜಿ.ಕೆ ಶೆಟ್ಟಿ, ಪತ್ರ ಬರೆದಿದ್ದು, ಒಂದೊಮ್ಮೆ ದರ ಹೆಚ್ಚಿಸಿದರೆ, ಹೋಟೆಲ್ ಉದ್ಯಮದ ಮೇಲೆ, ದೊಡ್ಡ ಮಟ್ಟದಲ್ಲಿ, ನಕಾರಾತ್ಮಕ ಪರಿಣಾಮ ಬೀರಲಿದೆ ಎಂದು, ಕಳವಳ ವ್ಯಕ್ತಪಡಿಸಿದ್ದಾರೆ.

<><><>

ಕಾರವಾರ ಜಿಲ್ಲೆಯ ರೈತರಿಗೆ ಹವಾಮಾನ ಆಧಾರಿತ ಬೆಳೆ ವಿಮೆಯಲ್ಲಿ ಪರಿಹಾರ ವಿತರಣೆಗೆ ತೊಡಕಾಗುವುದನ್ನು ತಪ್ಪಿಸುವ ಸಲುವಾಗಿ ಜಿಲ್ಲೆಯ ಸ್ವಯಂ ಚಾಲಿತ ಹವಾಮಾನ ಮತ್ತು ಮಳೆ ಮಾಪನ ಕೇಂದ್ರಗಳನ್ನು ಸಮರ್ಪಕವಾಗಿ ನಿರ್ವಹಣೆ ಮಾಡಲು ಕ್ರಮ ಕೈಗೊಳ್ಳಬೇಕು ಎಂದು ಉತ್ತರಕನ್ನಡ ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಆಗ್ರಹಿಸಿದ್ದಾರೆ. ಈ ಕುರಿತು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿರುವ ಅವರು,  ರಾಜ್ಯ ವಿಪತ್ತು ನಿರ್ವಹಣಾ ಸಂಸ್ಥೆಗೆ ಒಳಪಟ್ಟಿರುವ ಜಿಲ್ಲೆಯ ಸ್ವಯಂಚಾಲಿತ ಹವಾಮಾನ ಮತ್ತು ಮಳೆ ಮಾಪನ ಕೇಂದ್ರಗಳ ನಿರ್ವಹಣೆ ಕೈಗೊಳ್ಳಬೇಕಿದೆ. ಭವಿಷ್ಯದಲ್ಲಿ ಸಮಸ್ಯೆ ಉದ್ಭವವಾಗದಂತೆ ನೋಡಿಕೊಳ್ಳುವುದಕ್ಕಾಗಿ ಈ ಕೇಂದ್ರಗಳ ಸೂಕ್ತ ನಿರ್ವಹಣೆ ಮಾಡುವಂತೆ ರಾಜ್ಯ ವಿಪತ್ತು ನಿರ್ವಹಣಾ ಸಂಸ್ಥೆಗೆ ಸೂಕ್ತ ಸೂಚನೆ ನೀಡಬೇಕು ಎಂದು ಸಂಸದ ಕಾಗೇರಿ ಪತ್ರದಲ್ಲಿ ಆಗ್ರಹಿಸಿದ್ದಾರೆ.

<><><>

ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಖಾತೆ ಸಚಿವ ನಿತಿನ್ ಗಡ್ಕರಿ ಅವರನ್ನು, ರಾಯಚೂರು–ಯಾದಗಿರಿ ಸಂಸದ ಜಿ.ಕುಮಾರ ನಾಯಕ, ಹೊಸ ದಿಲ್ಲಿಯಲ್ಲಿ  ಭೇಟಿ ಮಾಡಿ, ಬೆಳಗಾವಿ–ಹುನಗುಂದ–ರಾಯಚೂರು ಚತುಷ್ಪಥ ರಾಷ್ಟ್ರೀಯ ಹೆದ್ದಾರಿ ಕಾಮಗಾರಿ ಕುರಿತು, ಚರ್ಚಿಸಿದರು.

ಚತುಷ್ಪಥ ಹೆದ್ದಾರಿಗೆ ನಿರ್ಮಿಸಿದ ತಡೆಗೋಡೆಯಿಂದ, ಅಕ್ಕಪಕ್ಕದ ಜನರಿಗೆ ತುಂಬ ತೊಂದರೆಯಾಗುತ್ತಿದ್ದು, ಪರ್ಯಾಯ ವ್ಯವಸ್ಥೆ ಕಲ್ಪಿಸಿ, ಸ್ಥಳೀಯರ ಸಂಚಾರಕ್ಕೆ ಅಲ್ಲಲ್ಲಿ ಅನುವು ಮಾಡುವಂತೆ, ಮನವಿ ಸಲ್ಲಿಸಿದರು. ಸಿರವಾರದಿಂದ ರಾಯಚೂರವರೆಗೆ, ರಾಷ್ಟ್ರೀಯ ಹೆದ್ದಾರಿ ಕಾಮಗಾರಿಯನ್ನು ಆದಷ್ಟು ಶೀಘ್ರ ಪ್ರಾರಂಭಿಸುವಂತೆ, ಸಂಸದರು ಸಚಿವ ಸಚಿವರನ್ನು ಕೋರಿದರು.

<><><>

ಉತ್ತರಪ್ರದೇಶದ ಪ್ರಯಾಗ್‌ರಾಜ್‌ನಲ್ಲಿ, 144 ವರ್ಷಗಳ ಬಳಿಕ ಜರುಗಿದಮಹಾಕುಂಭದಲ್ಲಿ, ‘ನೇತ್ರ ಕುಂಭ’ ಸಹ ದಾಖಲೆ ಬರೆದಿದೆ ಎಂದು, ನೇತ್ರ ಕುಂಭದ ಮುಖ್ಯ ವೈದ್ಯಾಧಿಕಾರಿ ಡಾಕ್ಟರ್ ಪ್ರವೀಣ್ ಕುಮಾರ್ ರೆಡ್ಡಿ ತಿಳಿಸಿದ್ದಾರೆ. ದೇಶದ ವಿವಿಧ ರಾಜ್ಯಗಳಿಂದ ಬಂದ 2 ಕೋಟಿ 3 ಲಕ್ಷಕ್ಕೂ ಹೆಚ್ಚು ಭಕ್ತರಿಗೆ ಕಣ್ಣಿನ ಪರೀಕ್ಷೆ ನಡೆಸಿ, 1 ಕೋಟಿ 6 ಲಕ್ಷ ಜನರಿಗೆ, ಉಚಿತ ದೃಷ್ಟಿ ತಿದ್ದುಪಡಿ ಕನ್ನಡಕಗಳನ್ನು ನೀಡಲಾಗಿದೆ. 17 ಸಾವಿರಕ್ಕೂ ಹೆಚ್ಚು ಜನರನ್ನು, ಕಣ್ಣಿನ ಹೆಚ್ಚಿನ ತಪಾಸಣೆಗೆ ಸೂಚಿಸಲಾಗಿದೆ ಎಂದು ಡಾಕ್ಟರ್ ರೆಡ್ಡಿ ಹೇಳಿದರು.

<><><>

ಗ್ರಾಮ ಹಾಗೂ ತಾಲೂಕು ಮಟ್ಟದ, ಭೂ ದಾಖಲೆಗಳನ್ನು ತಾಳೆ ಮಾಡಿ, ಕ್ರಮಬದ್ಧಗೊಳಿಸುವ ಜಮಾಬಂದಿ ಪ್ರಕ್ರಿಯೆಯನ್ನು, ವೇಗವಾಗಿ ನಿರ್ವಹಿಸಲು, ಮುಂಬರುವ ಒಂದು ವರ್ಷದೊಳಗೆ ‘ಇ-ಜಮಾಬಂದಿ’ ತಂತ್ರಾಂಶ ಸಿದ್ಧಗೊಳ್ಳಲಿದೆ ಎಂದು, ಕಂದಾಯ ಖಾತೆ ಸಚಿವ ಕೃಷ್ಣ ಬೈರೇಗೌಡ ತಿಳಿಸಿದ್ದಾರೆ.

ವಿಧಾನಪರಿಷತ್ತಿನಲ್ಲಿ ಶಾಸಕ ಜವರಾಯಿಗೌಡ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ಇದರಿಂದ ಗ್ರಾಮ ಲೆಕ್ಕಿಗರ ಮೇಲಿನ ಕಾರ್ಯದ ಒತ್ತಡ ಕಡಿಮೆ ಆಗಲಿದ್ದು, ಜಮಾಬಂದಿ ಪ್ರಕ್ರಿಯೆಗೆ ವೇಗ ದೊರೆಯಲಿದೆ ಎಂದರು.

<><><>

ಬಿರು ಬೇಸಿಗೆ ಹಿನ್ನೆಲೆ, ಕಲಬುರಗಿ ಜಿಲ್ಲಾಧಿಕಾರಿ ಬಿ.ಫೌಜಿಯಾ ತರನ್ನುಮ್ ಅವರು, ಕಲಬುರಗಿ ತಾಲೂಕಿನ ವಿವಿಧ ಗ್ರಾಮಗಳಿಗೆ ಭೇಟಿ ನೀಡಿ. ಗ್ರಾಮೀಣ ಭಾಗದ ಕುಡಿಯುವ ನೀರಿನ ಸ್ಥಿತಿ, ಗತಿ ಕುರಿತು ಅವಲೋಕಿಸಿದರು. ಭೀಮಳ್ಳಿ ಗ್ರಾಮ ಪಂಚಾಯ್ತಿ ವ್ಯಾಪ್ತಿಯ ಜಾಫರಾಬಾದ ಗ್ರಾಮಕ್ಕೆ ತೆರಳಿ, ಆಶ್ರಯ ಕಾಲೋನಿ, ಪಂಡಿತ್ ದೀನ್ ದಯಾಳ ನಗರ, ಎಸ್.ಎಂ.ಕೃಷ್ಣ ಕಾಲೋನಿಗಳ ಮನೆ-ಮನೆಗಳಿಗೆ ಭೇಟಿ ನೀಡಿ, ನೀರು ಪೂರೈಕೆ ವ್ಯತ್ಯಯ ಸರಿಪಡಿಸುವಂತೆ, ಸಂಬಂಧಿತ ಅಧಿಕಾರಿಗಳಿಗೆ ಸೂಚಿಸಿದರು.

<><><>

ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ ಕಾಯ್ದೆ-2007 ರ ಉಲ್ಲಂಘನೆ ಆರೋಪದ ಮೇರೆಗೆ, ಕಲಬುರಗಿ ಜಿಲ್ಲೆಯಲ್ಲಿ, ವಿದ್ಯಾರ್ಹತೆ ಇಲ್ಲದ ಮತ್ತು ಅಡ್ಡ ಅಭ್ಯಾಸ ಹೊಂದಿದ್ದ, 59 ಜನರಿಗೆ 5 ಲಕ್ಷದ 5 ಸಾವಿರ ರೂಪಾಯಿ ದಂಡ ವಿಧಿಸಿ, ಜಿಲ್ಲಾಧಿಕಾರಿ ಆದೇಶಿಸಿದ್ದಾರೆ.

<><><>

**ಬೆಂಗಳೂರು ನಗರ ವಿಶ್ವವಿದ್ಯಾಲಯದ, ಜಾಗತಿಕ ಭಾಷೆಗಳ ಅಧ್ಯಯನ ಕೇಂದ್ರ, 40ನೇ ವಾರ್ಷಿಕೋತ್ಸವದ ಸಂಭ್ರಮದಲ್ಲಿದೆ. 1985 ರಲ್ಲಿ ಸ್ಥಾಪಿತವಾದ ವಿದೇಶಿ ಭಾಷೆಗಳ ಇಲಾಖೆ, 2017ರಲ್ಲಿ ಜಾಗತಿಕ ಭಾಷೆಗಳ ಅಧ್ಯಯನ ಕೇಂದ್ರ ಎಂದು ಮರು ನಾಮಕರಣಗೊಂಡಿತು. ಇಡೀ ದಕ್ಷಿಣ ಭಾರತದಲ್ಲಿ, ಒಂದೇ ಸೂರಿನಡಿ, 14 ವಿದೇಶಿ ಭಾಷೆಗಳನ್ನು ಅಲ್ಪಾವಧಿ ಕೋರ್ಸ್‌ಗಳಿಂದ, ಡಾಕ್ಟರೇಟ್ ಪದವಿ ಹಂತದವರೆಗೆ ಬೋಧಿಸುತ್ತಿರುವ, ಏಕೈಕ ಸಂಸ್ಥೆ ಇದಾಗಿದೆ. ನಾಡಿದ್ದು, 15 ರಂದು ಮಧ್ಯಾಹ್ನ 2 ಗಂಟೆಗೆ, ಸೆಂಟ್ರಲ್ ಕಾಲೇಜು ಆವರಣದ, ಜ್ಞಾನಜ್ಯೋತಿ ಸಭಾಂಗಣದಲ್ಲಿ, ಬೆಂಗಳೂರಿನ ಜಪಾನ್ ಕಾನ್ಸುಲೇಟ್ ಜನರಲ್ ಸಹಯೋಗದಲ್ಲಿ, ಪ್ರಧಾನ ಸಮಾರಂಭ ಜರುಗಲಿದೆ.**

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**
**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ 1 ಗಂಟೆ 10 ನಿಮಿಷಕ್ಕೆ.**

<><><><><><>